# ಕೃಷ್ಣ – ಸುಧಾಮ (ನಾಟಕ)

ಮೌಲ್ಯ : ನಿಜವಾದ ಗೆಳೆತನದ ಬೆಸುಗೆ ಮುರಿದು ಹೋಗುವಂಥದ್ದಲ್ಲ.

## ಪದಗಳ ಅರ್ಥ

1. ಕಂಗಾಲಾಗು –ಕಂಗೆಡು
2. ವಿಧೇಯತೆ – ನಮ್ರತೆ
3. ಪಾಂಡಿತ್ಯ– ವಿದ್ವತ್ತು
4. ಸ್ನೇಹ– ಗೆಳೆತನ
5. ಸಂಕೋಚ –ಕುಗ್ಗುವುದು
6. ಕೃಪೆ –ದಯೆ
7. ಆಶ್ಚರ್ಯ – ಬೆರಗು
8. ಆಭರಣ–ಒಡವೆ
9. ಇಂಗಿತ–ಆಶಯ

## ಕವಿ ಕೃತಿ ಪರಿಚಯ

ಕವಿ – ವಿ. ಎಸ್. ಶಿರಹಟ್ಟಿಮಠರು

ಜನನ – (೧–೨–೧೯೫೩) 1–2–1953

ಸ್ಥಳ – ಗದಗ ಜಿಲ್ಲೆಯ ಹೊಂಬಳ

ತಂದೆ – ಶಂಕರಯ್ಯ

ತಾಯಿ – ಗುರುಸಿದ್ಧವ್ವ

ನಾಟಕಗಳು – ತುಂಬಿದ ಕೊಡ, ನರಗುಂದ ಬಂಡಾಯ, ಮಾಡಿದ್ದುಣ್ಣೋ ಮಾರಾಯ, ಗುಣವಂತ ರಾಜಕುಮಾರ.

ಪ್ರಶಸ್ತಿ – ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ.

## ಅ. ಈ ಪದಗಳಿಗೆ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.

1. ಗೆಳೆಯ – ಮಿತ್ರ, ಸ್ನೇಹಿತ
2. ಹೆಂಡತಿ – ಪತ್ನಿ, ಮಡದಿ
3. ರಾಜ – ಅರಸ, ರಾಯ
4. ದುಡಿಮೆ – ಪರಿಶ್ರಮ, ಶ್ರಮಿಸು.

## ಆ. ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.

1. ಪರಮಮಿತ್ರ : ನಾನು ನನ್ನ ಪರಮಮಿತ್ರ ಒಟ್ಟಿಗೆ ಅಭ್ಯಾಸ ಮಾಡುತ್ತೇವೆ.
2. ವಿಶ್ರಾಂತಿ : ಸತತ ಕೆಲಸದ ನಂತರ ವಿಶ್ರಾಂತಿಯ ಅವಶ್ಯಕತೆ ಇರುತ್ತದೆ.
3. ಸತ್ಕಾರ : ಮನೆಗೆ ಬಂದ ಅತಿಥಿಗಳನ್ನು ಸತ್ಕರಿಸುವುದು ನಮ್ಮ ಸಂಸ್ಕೃತಿ.
4. ಸಂತೋಷ : ನಾನು ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದರೆ ನನ್ನ ತಂದೆ, ತಾಯಿ ಸಂತೋಷ ಪಡುತ್ತಾರೆ.
5. ಶ್ರಮಿಸು : ಯಾವುದೆ ಕ್ಷೇತ್ರದಲ್ಲಿ ಸಾಧನೆ ಮಾಡಲು ಶ್ರಮಿಸುವುದು ಅವಶ್ಯಕ.

## ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಸುಧಾಮ ಯಾವುದನ್ನು ಮಾನವ ಧರ್ಮ ಎನ್ನುತ್ತಾನೆ ?

ಉ : ಸುಧಾಮ ಜೀವನದ್ದಲ್ಲಿ ಬಂದದ್ದನ್ನು ಅನುಭವಿಸಲೇ ಬೇಕು. ಅದೇ ಮಾನವ ಧರ್ಮ ಎನ್ನುತ್ತಾನೆ.

2. ಯಾರಿಗಾಗಿ ಶ್ರೀಕೃಷ್ಣನ ಬಳಿ ಸಹಾಯ ಕೇಳಲು ಸುಧಾಮನ ಪತ್ನಿ ಹೇಳುತ್ತಾಳೆ?

ಉ : ಮಕ್ಕಳಿಗಾಗಿ ಶ್ರೀಕೃಷ್ಣನ ಬಳಿ ಸಹಾಯ ಕೇಳಲು ಸುಧಾಮನ ಪತ್ನಿ ಹೇಳುತ್ತಾಳೆ.

3. ಸುಧಾಮನ ಕಣ್ಣಲ್ಲಿ ನೀರು ಏಕೆ ಬಂತು?

ಉ : ಶ್ರೀಕೃಷ್ಣ ಸುಧಾಮನನ್ನು ಕೈ ಹಿಡಿದು ಒಳಗೆ ಕರೆದುಕೊಂಡು ಬಂದಾಗ ಸುಧಾಮನ ಕಣ್ಣಲ್ಲಿ ನೀರು ಬಂತು.

4. ಮನೆಗೆ ಮರಳಿದ ಸುಧಾಮನು ಏನನ್ನು ಕಂಡನು?

ಉ :ಮನೆಗೆ ಮರಳಿದ ಸುಧಾಮನು ತನ್ನ ಗುಡಿಸಲಿನ ಜಾಗದಲ್ಲಿ ಅರಮನೆಯಂತಹ ಮನೆ ಇದ್ದದ್ದನ್ನು ಕಂಡನು.

5. ಸುಧಾಮನ ಮನೆಯನ್ನು ಕಟ್ಟಿಸಿದವರು ಯಾರು?

ಉ : ಸುಧಾಮನ ಮನೆಯನ್ನು ಕಟ್ಟಿಸಿದವರು ಶ್ರೀಕೃಷ್ಣ.

## ಈ. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ.

1. ಕೃಷ್ಣ-ಸುಧಾಮರು ಗುರುಕುಲದಲ್ಲಿ ಕಳೆದ ದಿನಗಳನ್ನು ಪರಸ್ಪರ ನೆನಪಿಸಿಕೊಂಡದ್ದು ಹೇಗೆ?

ಉ :ಕೃಷ್ಣ-ಸುಧಾಮರು ಒಟ್ಟಿಗೆ ಊಟ ಮಾಡುತ್ತಿದ್ದದ್ದು, ಕೂಡಿ ಕಲಿಯುತ್ತಿದ್ದದ್ದು, ಕಟ್ಟಿಗೆ ತರಲು ಹೋಗುತ್ತಿದ್ದದ್ದು, ಗುರುಮಾತೆ ಕೊಟ್ಟ ಹುರಿದ ಕಡಲೆ ತಿಂದಿದ್ದು, ಹಾಗೂ ಸುಧಾಮನ ಪಾಲಿನ ಕಡಲೆಯನ್ನು ಕೃಷ್ಣ ಕಸಿದುಕೊಂಡು ತಿಂದ್ದದ್ದು ಹೀಗೆ ತಾವು ಗುರುಕುಲದಲ್ಲಿ ಕಳೆದ ದಿನಗಳನ್ನು ಪರಸ್ಪರ ನೆನಪಿಸಿಕೊಂಡರು.

2. ಕೃಷ್ಣನು ಸುಧಾಮನಿಗೆ ಮನೆ ಕಟ್ಟಿಸಿಕೊಟ್ಟ ಸಂದರ್ಭವನ್ನು ವಿವರಿಸಿರಿ?

ಉ : ಸುಧಾಮನ ಹೆಂಡತಿ ಶ್ರೀಕೃಷ್ಣನು ಮನೆ ಕಟ್ಟಿಸಿಕೊಟ್ಟ ಸಂದರ್ಭವನ್ನು ಈ ರೀತಿ ವಿವರಿಸಿದಳು, ನೀವು ದ್ವಾರಕ ನಗರ ತಲುಪಿದ ದಿನವೇ ಅಲ್ಲಿಂದ ಸೇವಕರ ದಂಡು

ಬಂತು, ಬೇಕಾದ ಎಲ್ಲ ವಸ್ತುಗಳನ್ನು ತಂದರು, ಚಕಚಕಾಂತ ಮನೆ ನಿರ್ಮಿಸಿದರು ಎಂದು ಹೇಳಿದಳು.

ಉ. ಕೆಳಗಿನ ಮಾತುಗಳನ್ನು ಯಾರು, ಯಾರಿಗೆ, ಯಾವಾಗ ಹೇಳಿದರು?

1. ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ, ಸ್ನೇಹ, ಗೌರವ.

ಆಕರ : ಈ ಮೇಲಿನ ವಾಕ್ಯವನ್ನು ವಿ, ಎಸ್, ಶಿರಹಟ್ಟಿಮಠರು ಬರೆದ 'ಕೃಷ್ಣ-ಸುಧಾಮ' ನಾಟಕದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಸುಧಾಮ ಶ್ರೀಕೃಷ್ಣ ತನ್ನ ಸ್ನೇಹಿತ ಎಂದು ಹೇಳಿದಾಗ ಆತನ ಹೆಂಡತಿ ನೀವು ಸತ್ಯ ಹೇಳುವಿರಾ! ಆ ಶ್ರೀಮಂತರೆಲ್ಲಿ, ನೀವೆಲ್ಲಿ? ಯಾಕೆ ಸುಮ್ಮನೆ ಬಡಾಯಿ ಬಿಡ್ತೀರಾ? ಎಂದಾಗ ತನ್ನ ಹಾಗೂ ಕೃಷ್ಣನ ಸ್ನೇಹದ ಕುರಿತು ತನ್ನ ಹೆಂಡತಿಗೆ ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಗೆಳೆತನದಲ್ಲಿ ಯಾವುದೇ ಬಗೆಯ ಭೇದ, ಭಾವ ಇರುವುದಿಲ್ಲ.

2. ಹಸಿದಿರುವ ಮಕ್ಕಳಿಗೋಸ್ಕರನಾದರೂ ಹೋಗಿ ಕೇಳಿ.

ಆಕರ :ಈ ಮೇಲಿನ ವಾಕ್ಯವನ್ನು ವಿ, ಎಸ್, ಶಿರಹಟ್ಟಿಮಠರು ಬರೆದ 'ಕೃಷ್ಣ-ಸುಧಾಮ' ನಾಟಕದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಸುಧಾಮ ತಾನು ಕೃಷ್ಣನ ಸ್ನೇಹಿತ ಎಂದು ಹೇಳಿದಾಗ ಆತನ ಹೆಂಡತಿ ಅಂತಹ ಶ್ರೀಮಂತ ಸ್ನೇಹಿತನಿದ್ದರೂ ಇಲ್ಲಿಯವರೆಗೆ ನೀವು ಏಕೆ ಅವರ ಹತ್ತಿರ ಸಹಾಯ ಕೇಳಲಿಲ್ಲ? ಎಂದಾಗ ಸುಧಾಮ ಬಡವನಾದವ ದೊಡ್ಡವರ ಮನೆಗೆ ಸಹಾಯ ಕೇಳಲು ಹೋಗಬಾರದು ಎನ್ನುತ್ತಾನೆ ಆ ಸಂದರ್ಭದಲ್ಲಿ ಸುಧಾಮನ ಹೆಂಡತಿ ಈ ಮೇಲಿನಂತೆ ಹೇಳುತ್ತಾಳೆ.

ಸ್ವಾರಸ್ಯ : ಸ್ನೇಹಿತರೆದುರು ಸ್ವಾಭಿಮಾನ ಇರಬಾರದು.

3. ನಿಮಗೂ ರೇಷ್ಮೆ ಬಟ್ಟೆ ಕೊಟ್ಟಿದ್ದಾರೆ.

ಆಕರ : ಈ ಮೇಲಿನ ವಾಕ್ಯವನ್ನು ವಿ, ಎಸ್, ಶಿರಹಟ್ಟಿಮಠರು ಬರೆದ 'ಕೃಷ್ಣ-ಸುಧಾಮ' ನಾಟಕದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಸುಧಾಮ ಕೃಷ್ಣನ ಅರಮನೆಯಿಂದ ಮರಳಿದಾಗ, ತನ್ನ ಗುಡಿಸಲಿದ್ದ ಸ್ಥಳದಲ್ಲಿ ಸುಂದರವಾದ ಮನೆ, ಹೆಂಡತಿ, ಮಕ್ಕಳು ಹೊಸ ಬಟ್ಟೆ ಧರಿಸಿ ಮನೆಯಲ್ಲಿ ಸಂತೋಷದಿಂದ ಇರುವುದನ್ನು ಕಂಡು ಇದು ಯಾರ ಮನೆ ಎಂದು ಹೆಂಡತಿಯನ್ನು

ಕೇಳಿದನು ಆಗ ಹೆಂಡತಿ ನಡೆದ ಪ್ರಸಂಗವನ್ನು ವಿವರಿಸುವಳು ಆ ಸಂದರ್ಭದಲ್ಲಿ ಸುಧಾಮನ ಮಗ ಈ ಮೇಲಿನಂತೆ ಹೇಳುತ್ತಾನೆ.

ಸ್ವಾರಸ್ಯ : ಸ್ನೇಹಕ್ಕಿಂತ ಮಿಗಿಲಾದದ್ದು ಯಾವುದು ಇಲ್ಲ.